


## ಸರ್ವಜ್ಞನಪ್ಪಂ ನರಂ

❑ ಎಂ.ಟಿ. ವಿಶ್ವನಾಥಯ್ಯ

**ಸೋಮನಾಥ ಕವಿಯ ಒಂದು ಪದ್ಯವನ್ನು ಆಧಾರವಾಗಿಟ್ಟುಕೊಂಡು ಒಬ್ಬ ಆದರ್ಶ ವಿದ್ಯಾರ್ಥಿಯು ಹೇಗಿರಬೇಕೆಂಬುದನ್ನು ವಿವರಿಸಿರುವ ಶ್ರೀ ವಿಶ್ವನಾಥಯ್ಯ ಅವರ ವೈಚಾರಿಕ ಲೇಖನಗಳು ಹಾಗೂ ಕೃತಿಗಳು ಪ್ರಕಟಗೊಂಡು ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ.**

ಮನುಷ್ಯ ಜ್ಞಾನ ಸಂಪಾದನೆ ಮಾಡಿ ಸರ್ವಜ್ಞತ್ವವನ್ನು ಹೇಗೆ ಪಡೆಯಲು ಸಾಧ್ಯ ಎಂಬುದನ್ನು ಸೋಮನಾಥ ಕವಿ ಹೀಗೆ ಹೇಳುತ್ತಾನೆ :

ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಿಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಗದಿಂದಲರಿಯಲ್, ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ॥

ಜೇನ್ನುಂಬಿಯು ವೈವಿಧ್ಯಮಯವಾದ ಅನೇಕ ಪುಷ್ಪಗಳಿಂದ ಮಕರಂದವನ್ನು ಸಂಗ್ರಹಿಸಿ ಸಿಹಿಯಾದ ಮಧುವನ್ನು ತಯಾರಿಸುತ್ತದೆ. ಅದರಂತೆ ವಿದ್ಯಾರ್ಥಿಯು ವಿವಿಧ ಮೂಲಗಳಿಂದ ಜ್ಞಾನ ಸಂಪಾದನೆ ಮಾಡಬೇಕು. ಹನಿಗೂಡಿದರೆ ಹಳ್ಳ, ಅನೇಕ ಹಳ್ಳಗಳು ಸೇರಿದರೆ ಸಮುದ್ರವಾಗುವಂತೆ ವಿವಿಧ ಮೂಲಗಳಿಂದ ಜ್ಞಾನ ಗಳಿಸಿ ಸರ್ವಜ್ಞತ್ವವನ್ನು ಪಡೆಯಬೇಕಾಗುತ್ತದೆ. ಮೇಲಿನ ಕವಿತೆಯನ್ನು ಮುಂದೆ ವಿವೇಚಿಸಿದೆ.

### ಕೆಲವಂ ಬಲ್ಲವರಿಂದ ಕಲ್ತು

ಬಲ್ಲ ಗುರುಹಿರಿಯರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಯು ವಿದ್ಯಾರ್ಜನೆ ಮಾಡಬೇಕು. "ಗುರುವೆ ಸಾಕ್ಷಾತ್ ಪರಬ್ರಹ್ಮ" ಎಂದು ಭಾವಿಸಿ, ಶ್ರದ್ಧಾ ಭಕ್ತಿಯಿಂದ ಅವರ ಮಾತುಗಳನ್ನು ಕೇಳಬೇಕು. ಯಾವುದೇ ಕ್ಷೇತ್ರದಲ್ಲಿ ಸಿದ್ಧಿಯನ್ನು ಪಡೆಯಲು ಆ ಕ್ಷೇತ್ರದಲ್ಲಿ ಪರಿಣತರ ಬೋಧನೆಯಂತೆ ಸತತ ಸಾಧನೆ ಮಾಡಬೇಕು. ಅವರು ಒಳ್ಳೆಯ ಆಟಗಾರರಿರಬಹುದು, ಸಂಗೀತಜ್ಞರಿರಬಹುದು, ವಾಗ್ಮಿಗಳಿರಬಹುದು. "ಅವರಂತೆ ನಾವಾಗಲು ಸಾಧ್ಯವಿಲ್ಲ. ಅದು ದೈವದತ್ತವಾದುದು" ಎಂದು ತಿಳಿಯುವುದುಂಟು. ಆದರೆ ಅವರು ಆ ಮಟ್ಟವನ್ನು ಮುಟ್ಟಲು ಬಹುದೀರ್ಘಕಾಲ ಅಭ್ಯಾಸ ಮಾಡಿರುತ್ತಾರೆ ಎಂಬುದನ್ನು ಮರೆಯಬಾರದು. ಅಂತಹ ಗುರಿಸಾಧಿಸಲು ಹಂಬಲದ ಬೆಂಬಲ ಬೇಕು. ಕಲಿಯಬೇಕೆಂಬ ಆಸೆ ಬೇಕು. ಬಲ್ಲವರ ಮಾರ್ಗದರ್ಶನದಲ್ಲಿ ಅನವರತ ಸಾಧನೆ ಮಾಡಬೇಕು.

### ಕೆಲವಂ ಶಾಸ್ತ್ರಂಗಳಿಂ ಕೇಳುತಂ

ನಮ್ಮ ಧರ್ಮಶಾಸ್ತ್ರಗಳು ಬುದ್ಧಿಗೆ ಒಂದು ಸಂಸ್ಕಾರವನ್ನು ಕೊಡುತ್ತವೆ. ನಾವು ಗಳಿಸಿದ ವಿದ್ಯೆ ಸಾರ್ಥಕವಾಗಬೇಕಾದರೆ, ನಮ್ಮ ಜೀವನವು ನೈತಿಕ ಪರಿಪೂರ್ಣತೆಯನ್ನು ಪಡೆದಿರಬೇಕು. ಇಲ್ಲದಿದ್ದರೆ ನಮ್ಮ ಜ್ಞಾನವು ಅನೈತಿಕ ಮಾರ್ಗದಲ್ಲಿ ಬೆಳೆಯುತ್ತದೆ. ಆಗ ನಮ್ಮ ಸ್ವಾರ್ಥಸಾಧನೆಗೆ ಅದು ಉಪಯೋಗವಾಗುತ್ತದೆ. ಅನೈತಿಕ ಜೀವನ ನಡೆಸಲು ವಿದ್ಯೆ ಸಹಾಯಕವಾಗುತ್ತದೆ. ವಿದ್ಯೆ ಒಳ್ಳೆಯ ರೀತಿಯಲ್ಲಿ ಉಪಯೋಗವಾಗಬೇಕಾದರೆ ವೃತ್ತಿಯಲ್ಲಿ ನೈತಿಕ ಪರಿವರ್ತನೆ ಉಂಟಾಗಬೇಕು. ಇದು ಧರ್ಮಶಾಸ್ತ್ರಗಳ, ಸದ್ಗ್ರಂಥಗಳ ಪಠನ ಮತ್ತು ಅನುಷ್ಠಾನಗಳಿಂದ ಸಾಧ್ಯವಾಗುತ್ತದೆ.

### ಕೆಲವಂ ಮಾಳ್ಪವರಿಂದ ಕಂಡು

ವಿದ್ಯಾರ್ಥಿಗೆ 'ಗುರು' ಮುಖ್ಯ, ಅಂತೆಯೇ ಅವನಿಗೆ 'ಗುರಿ'ಯೂ ಮುಖ್ಯ. ಬಾಳಿಗೊಂದು ಗುರಿ ಬೇಕು, ಆದರ್ಶ ಇರಬೇಕು, ದೊಡ್ಡವರ ಮಾದರಿ ಬೇಕು. ಗುರಿಸಾಧನೆಗೆ ಸತತ ಪ್ರಯತ್ನ ಬೇಕು. ಶಾಸ್ತ್ರವಾಕ್ಯಗಳನ್ನು, ಹಿರಿಯರ ಒಳ್ಳೆಯ ಉಪದೇಶಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದಿರುವ ಕೆಲವರನ್ನು ನೋಡಿ ಕಲಿಯಬೇಕು. ನೀವು ಹೃತ್ಪೂರ್ವಕವಾಗಿ ಗೌರವಿಸಿ ಪೂಜಿಸುವವರ ಗುಣಗಳನ್ನೂ ಆದರ್ಶಗಳನ್ನೂ ನಿಮ್ಮದಾಗಿ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಮಾದರಿಯಾಗಬಲ್ಲ ವ್ಯಕ್ತಿಗಳು ಸಮಾಜದಲ್ಲಿ ಆಗಿಹೋಗಿದ್ದಾರೆ— ವಿವೇಕಾನಂದ, ಸುಭಾಷ್‌ಚಂದ್ರ ಬೋಸ್, ವಿಶ್ವೇಶ್ವರಯ್ಯ ಇತ್ಯಾದಿ. ಅವರ ಜೀವನದ ಸಂದೇಶಗಳನ್ನು ಕುರಿತು ಆಲೋಚಿಸಬಹುದು. ಅವರ ಧ್ವನಿಯನ್ನು ಆಲಿಸಬಹುದು. ಸಿನಿಮಾ

ನಟನಟಿಯರನ್ನು ಕುರಿತ ವಿಚಾರಕ್ಕಿಂತ ಮಹಾವಿದ್ವಾಂಸರ, ವೀರರ, ಸಂತರ ಜೀವನದಲ್ಲಿ ಆತ್ಮಶಕ್ತಿಯ ಸಂಚಯವಿದೆ. ನಾವು ಎಷ್ಟು ಎತ್ತರಕ್ಕೆ ಏರಬಹುದು, ಮಾನವ ಪ್ರಜ್ಞೆಯು ಹಂಬಲಿಸುವ ಗುರಿ ಎಷ್ಟು ಉದಾತ್ತವಾಗಿರಬಹುದು ಎಂಬುದನ್ನು ಅವರು ತೋರಿಸಿ ಕೊಡುತ್ತಾರೆ. ಅಂಥವರ ಆದರ್ಶ ನಮ್ಮದಾಗಬೇಕು.

### ಕೆಲವಂ ಸುಜ್ಞಾನದಿಂ ನೋಡುತಂ

ಗೋವು ಹಗಲೆಲ್ಲಾ ಮೇದು, ರಾತ್ರಿ ಗೊಂತಿನಲ್ಲಿ ಮಲಗಿ ಮೆಲಕು ಹಾಕುತ್ತದೆ. ತಿಂದ ಆಹಾರವನ್ನು ಜಠರದಿಂದ ಮತ್ತೆ ಬಾಯಿಗೆ ತಂದುಕೊಂಡು ವಿಂಗಡಿಸಿ, ಅನುಪಯುಕ್ತವಾದುದನ್ನು ವಿಸರ್ಜಿಸಿ, ಉಪಯುಕ್ತವಾದುದನ್ನು ಮತ್ತೆ ಜಠರಕ್ಕೆ ಕಳುಹಿಸುತ್ತದೆ. ಅಂತೆಯೇ ನಾವು ದಿನದ ಚಟುವಟಿಕೆಗಳನ್ನು ಸಿಂಹಾವಲೋಕನದಿಂದ ಪರಿಶೀಲಿಸಬೇಕು. ದಿನದ ಕೊನೆಯ ಭಾಗದಲ್ಲಿ ನಿದ್ರಿಸುವ ಮೊದಲು "ನನ್ನ ಪಾಲಿಗೆ ಬಂದ ಆಯುಷ್ಯದಲ್ಲಿ ಈ ಒಂದು ದಿನವನ್ನು ಹೇಗೆ ಕಳೆದೆ? ನನಗೆ ಸಿಕ್ಕಿದ ಅವಕಾಶಗಳನ್ನು ಹೇಗೆ ಉಪಯೋಗಿಸಿಕೊಂಡೆ? ಎಲ್ಲಿ ತಪ್ಪುಗಳಾದವು? ಏನು ಕಾರಣ? ಮುಂದೆ ಅಂಥ ಸಂದರ್ಭಗಳು ಬಂದಾಗ ಹೇಗೆ ನಡೆದುಕೊಳ್ಳಬಹುದು? ಇಂದಿನ ಕೆಲಸವನ್ನು ಇನ್ನೂ ಚೆನ್ನಾಗಿ ಮಾಡಬಹುದಿತ್ತೇ?"—ಇವೇ ಮೊದಲಾದ ಪ್ರಶ್ನೆಗಳನ್ನು ಕೇಳುತ್ತ, ಪರದೆಯ ಮೇಲಣ ಚಿತ್ರವನ್ನು ನೋಡುವಂತೆ, ನಿರ್ಲಿಪ್ತನಾಗಿ ನಡೆದ ಘಟನೆಗಳನ್ನು ನೋಡಿ ಆತ್ಮಾವಲೋಕನ ಮಾಡಿಕೊಳ್ಳಬಹುದು. ಈ ಆತ್ಮಾವಲೋಕನದಿಂದ ನಮಗೂ ಮತ್ತು ಇತರರಿಗೂ ಸಹ್ಯವಲ್ಲದ ಗುಣಗಳನ್ನು ಬಿಟ್ಟುಬಿಡಲು ಸಾಧ್ಯ, ಉತ್ತಮ ಗುಣಗಳನ್ನು ಸಂಪಾದಿಸಲು ಸಾಧ್ಯ. ಹೀಗೆ ಚಿಂತನೆಯ ಮೂಲಕ ನಾವು ಕಲಿತದ್ದನ್ನು ಸರಿಯಾಗಿ ಅರ್ಥ ಮಾಡಿಕೊಂಡು, ವಿಚಾರಶಕ್ತಿಯನ್ನೂ ಮತ್ತು ಸ್ವತಂತ್ರ ಆಲೋಚನೆಯನ್ನೂ ಬೆಳೆಸಿಕೊಳ್ಳಬೇಕು.

### ಕೆಲವಂ ಸಜ್ಜನ ಸಂಗದಿಂದಲರಿಯಲ್

ಸಜ್ಜನರ ಸಂಗ ಒಳ್ಳೆಯ ಆಲೋಚನೆಗೆ, ತನ್ಮೂಲಕ ಒಳ್ಳೆಯ ಕಾರ್ಯ ಮಾಡಲು ಪ್ರೇರಣೆ ಕೊಡುತ್ತದೆ. ಸತ್ಸಂಗ ಎಂದರೆ ಸಾಧುಸಂತರ, ಸಾತ್ವಿಕ ಸಜ್ಜನರ ಸಹವಾಸ.

**ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ಒಳ್ಳೆಯವರೊಡನಿರ್ದ ಕಳ್ಳನೊಳ್ಳಿದನಕ್ಕು**—ಈ ಸರ್ವಜ್ಞನ ನುಡಿಗಳು ಸತ್ಸಂಗದ ಹಿರಿಮೆ ಮತ್ತು ಗರಿಮೆಯನ್ನು ತಿಳಿಸುತ್ತವೆ.

ಲಿಯೋ ಟಾಲ್‌ಸ್ಟಾಯ್ ಹೇಳುವಂತೆ,

- ಒಳ್ಳೆಯ ಆಲೋಚನೆ ಮಾಡಿ , ಅದು ನಿಮ್ಮನ್ನು ಒಳ್ಳೆಯ ಕೆಲಸಕ್ಕೆ ಪ್ರೇರೇಪಿಸುತ್ತದೆ.
- ಒಳ್ಳೆಯ ಕಾರ್ಯ ಕೈಕೊಳ್ಳಿ, ಅದು ನಿಮ್ಮನ್ನು ಒಳ್ಳೆಯ ಅಭ್ಯಾಸಕ್ಕೆಳೆಸೀತು.
- ಒಳ್ಳೆಯ ಅಭ್ಯಾಸ ರೂಢಿಸಿಕೊಳ್ಳಿ, ಅದು ನಿಮ್ಮ ನಡತೆಗೆ ಪುಟ ಕೊಟ್ಟೀತು.
- ಒಳ್ಳೆಯ ನಡತೆಯಿಂದ ನಿಮ್ಮ ಅದೃಷ್ಟ ಕುದುರಲೇಬೇಕು.

ಸಾಧುಸಜ್ಜನರ ಸಹವಾಸದಿಂದ ಪ್ರಶಾಂತ ಭಾವನೆ, ಧನ್ಯತೆ, ಶುದ್ಧಭಕ್ತಿ, ಉತ್ತಮ ಜ್ಞಾನ ಲಭ್ಯವಾಗುತ್ತದೆ.

ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿಚಾರಸಂಗ್ರಹಕ್ಕೆ ಪ್ರಾಧಾನ್ಯವಿದೆಯೇ ಹೊರತು, ಶೀಲವನ್ನು ರೂಪಿಸುವುದರಲ್ಲಿ ಅದು ಅಸಮರ್ಥವಾಗಿದೆ. ಆದುದರಿಂದ ವಿದ್ಯಾರ್ಥಿಗಳು ಸಜ್ಜನರ ಸಂಗದಿಂದ, ಸದ್ಗ್ರಂಥಗಳ ಅಧ್ಯಯನದಿಂದ ಬದುಕಿನ ಸಮಸ್ಯೆಗಳನ್ನು ಧೈರ್ಯ ಮತ್ತು ದಿಟ್ಟತನದಿಂದ ಎದುರಿಸುವ ಬಲವನ್ನು ಸಂಪಾದಿಸಬೇಕಾಗಿದೆ. ಮನುಷ್ಯರ ದೌರ್ಬಲ್ಯಗಳನ್ನು ರಂಜಕವಾಗಿ ತೋರಿಸುವ, ವರ್ಣಿಸುವ, ಅಸಂಖ್ಯ ಚಲನಚಿತ್ರ ಮತ್ತು ಬರಹಗಳಿಂದ ದೂರವಿದ್ದು, ಸಂಶೋಧಕರ, ವಿಜ್ಞಾನಿಗಳ, ಸಾಹಸೀ ಉದ್ಯಮಶೀಲ ವ್ಯಕ್ತಿಗಳ, ಸ್ವಾರ್ಥತ್ಯಾಗಿಗಳ, ಕರ್ಮವೀರರ, ದೇಶಪ್ರೇಮಿ ಸಮಾಜಸೇವಕರ, ದೈವವನ್ನು ನೆಚ್ಚಿ ಬದುಕಿದ ಸಾಧುಸಂತರ ಜೀವನ ಸಂದೇಶಗಳನ್ನು ಓದಬೇಕು. ಅಕ್ಷರ ವಿದ್ಯೆಯ ಜೊತೆಗೆ ಬದುಕನ್ನು ಹಸನಾಗಿಸುವ ವಿವಿಧ ಸಂಸ್ಕಾರಗಳ ಕಡೆಗೂ ಶೀಲವರ್ಧನೆಗೂ ಗಮನ ಕೊಡಬೇಕು.

### ಸರ್ವಜ್ಞನಪ್ಪಂ ನರಂ

ವಿದ್ಯಾರ್ಥಿಯು ಮೇಲೆ ವಿವರಿಸಿದಂತೆ ಒಳ್ಳೆಯ ವಿಷಯಗಳನ್ನು ಬಲ್ಲ ಗುರು ಹಿರಿಯರನ್ನು ಕೇಳಿ ತಿಳಿದು, ಧರ್ಮಶಾಸ್ತ್ರಗಳನ್ನೂ ಸದ್ಗ್ರಂಥಗಳನ್ನೂ ಅಧ್ಯಯನ ಮಾಡುತ್ತ, ದೊಡ್ಡವರ ಆದರ್ಶ ಮತ್ತು ಅನುಕರಣದಿಂದಲೂ ಸಜ್ಜನರ ಸಹವಾಸದಿಂದಲೂ ಕಲಿಯುತ್ತ, ಸ್ವಾಧ್ಯಾಯದಿಂದ ಚಿಂತಿಸುತ್ತ ಜ್ಞಾನ ಸಂಪಾದಿಸುವುದಲ್ಲದೆ ವಿವಿಧ ಸಂಸ್ಕಾರಗಳನ್ನು ಗಳಿಸಿ ಸರ್ವಜ್ಞನಾಗಲು ಸಾಧ್ಯ ಎಂಬುದು ಈ ಪದ್ಯದ ಸಾರಾಂಶ. ◆

---

ಆಗರ್ಭ ಶ್ರೀಮಂತನೊಬ್ಬನು ವಯಸ್ಸಿಗೆ ಬಂದ ತನ್ನ ಮಗನನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಅತ್ಯಂತ ಬಡಕುಟುಂಬದವರು ಹೇಗೆ ವಾಸಿಸುತ್ತಾರೆಂಬುದನ್ನು ತೋರಿಸಿದ. ಮನೆಗೆ ಬಂದಮೇಲೆ ತಾನು ಕಲಿತಿರುವುದೇನೆಂದು ತಂದೆ ವಿಚಾರಿಸಿದಾಗ ಮಗ ಉತ್ತರಿಸಿದ: "ನಾನು ನೋಡಿದೆ, ನಮ್ಮಲ್ಲಿ ಒಂದು ನಾಯಿಯಿದ್ದರೆ ಅವರ ಮನೆಯಲ್ಲಿ ನಾಲ್ಕು ನಾಯಿಗಳಿವೆ. ನಮ್ಮ ತೋಟದಲ್ಲಿ ಆಮದು ಮಾಡಿದ ದೀಪಗಳಿದ್ದರೆ, ಅಲ್ಲಿ ನಕ್ಷತ್ರಗಳಿವೆ. ನಾವು ವಾಸಿಸುವುದಕ್ಕೆ ಸಣ್ಣ ತುಂಡು ಜಾಗವಿದ್ದರೆ, ಅವರು ದೊಡ್ಡ ಹೊಲದಲ್ಲಿ ವಾಸಿಸುತ್ತಾರೆ, ನಮಗೆ ಸೇವೆ ಮಾಡಲು ಆಳುಗಳಿದ್ದಾರೆ, ಅವರು ಇತರರ ಸೇವೆ ಮಾಡುತ್ತಾರೆ. ನಾವು ನಮ್ಮ ಆಹಾರವನ್ನು ಕೊಂಡುಕೊಳ್ಳುತ್ತೇವೆ, ಅವರು ಅದನ್ನು ತಾವೇ ಬೆಳೆಯುತ್ತಾರೆ. ನಮ್ಮನ್ನು ರಕ್ಷಿಸಿಕೊಳ್ಳಲು ಇಲ್ಲಿ ಗೋಡೆಗಳಿದ್ದರೆ, ಅವರನ್ನು ರಕ್ಷಿಸಲು ಸ್ನೇಹಿತರಿದ್ದಾರೆ."

**ಇದನ್ನು ಕೇಳಿದಾಗ ಶ್ರೀಮಂತನು ತಾವೆಷ್ಟು ಬಡವರು ಎಂದು ಭಾವಿಸುತ್ತ ಮೂಕವಿಸ್ಮಿತನಾದ.**